# ಕಪಲೆಪ್ಪನ ದಿಡಿಗು

ಇದು ಬಯಲುಸೀಮೆಯ ಸುಂದರ ಜಲಪಾತ. ಚೆನ್ನಾಗಿ ಮಳೆ ಬಂದರೆ ಇಲ್ಲಿ ಪ್ರವಾಸಿಗರ ದಂಡೂ ಹೆಚ್ಚುತ್ತದೆ.

■ ಚಿತ್ರ ಬರಹ:
**ಶರಣಪ್ಪ ಬಾಚಲಾಪೂರ**



ಬರದ ಬೆಂಗಾಡಾಗಿರುವ ಕೊಪ್ಪಳ ಜಿಲ್ಲೆಯಲ್ಲಿ ಪ್ರಕೃತಿ ಸೌಂದರ್ಯ ಎಂಬುದು ಕನಸಿನ ಮಾತು ಎನ್ನುತ್ತಾರೆ. ಆದರೆ ಇಲ್ಲೊಂದು ಸುಂದರವಾದ ಜಲಪಾತವಿದೆ. ಜಲಪಾತವು ಈ ಭಾಗದ ಜನತೆಯ ಪಿಕನಿಕ್ ಸ್ಪಾಟ್ ಆಗಿದೆ. ಮಳೆಗಾಲದಲ್ಲಿ ಭೋರ್ಗರೆಯುವ ಜಲಪಾತ ಜನತೆಯನ್ನು ತನ್ನತ್ತ ಆಕರ್ಷಿಸುತ್ತದೆ.

ಮೂರು ವರ್ಷಗಳ ಕಾಲ ಮಳೆಯೇ ಇಲ್ಲದೆ ಈ ಜಲಪಾತ ಭಣಗುಡುತ್ತಿತ್ತು. ಆದರೆ ಕಳೆದ ವರ್ಷ ಕೊನೆಯಲ್ಲಿ ಸುರಿದ ಮಳೆಯಿಂದ ಜಲಪಾತ ಭೋರ್ಗರೆಯತೊಡಗಿತ್ತು. ಈಗ ಬೇಸಿಗೆಯಲ್ಲಿ ಮತ್ತೆ ಭಣ-ಗುಡುತ್ತಿದೆ. ಮಳೆಗಾಲದಲ್ಲಿ ಮೈತುಂಬುವ ನಿರೀಕ್ಷೆಯಿದೆ.

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಹನುಮಸಾಗರದಿಂದ ಪ್ರಾರಂಭ-ವಾಗುವ ಗುಡ್ಡಗಳ ಸರಣಿ ಬೆಳಗಾವಿ ಜಿಲ್ಲೆಯವರೆಗೂ ಹಬ್ಬಿಕೊಂಡಿದೆ. ಈ ಗುಡ್ಡ ಸರಣಿಯಲ್ಲಿ ಅನೇಕ ಧಾರ್ಮಿಕ, ಐತಿಹಾಸಿಕ ತಾಣಗಳಿದ್ದು ಅಲ್ಲಲ್ಲಿ ಪ್ರಕೃತಿ ಸೌಂದರ್ಯದ ತಾಣಗಳಿವೆ. ಇಂಥ ತಾಣಗಳಲ್ಲೊಂದು ಹನುಮ-ಸಾಗರ ಸಮೀಪದ ಕಬ್ಬರಗಿ ಗ್ರಾಮದ ಕಪಲೆಪ್ಪನ ದಿಡಿಗು. ಮೇಲಿಂದ ಭಾರಿ ರಭಸವಾಗಿ ನೀರು ಸುರಿಯುತ್ತಿದ್ದರೆ ಪ್ರವಾಸಿಗರು ಕುಣಿಯುವುದೊಂದು ಬಾಕಿ.

ಸ್ಥಳೀಯರು ಈ ಜಲಪಾತವನ್ನು ಕಪಲೆಪ್ಪನ ದಿಡಿಗು ಎಂದು ಕರೆಯುತ್ತಾರೆ. ಇದರ ಶಿಷ್ಟ ಹೆಸರು ಕಪಿಲತೀರ್ಥ. ಹೈದರಾಬಾದ್ ಕರ್ನಾಟಕದ ಏಕೈಕ ಮಿನಿ ಜೋಗ ಎಂಬ ಖ್ಯಾತಿಯೂ ಇದೆ.

ಈ ಮಿನಿಜೋಗಕ್ಕೆ ನೀರು ಬಂದರೆ ಕೊಪ್ಪಳ, ಬಾಗಲಕೋಟ್, ಗದಗ ಜಿಲ್ಲೆಯ ಪ್ರವಾಸಿಗರ ದೊಡ್ಡ ದಂಡೇ ಇಲ್ಲಿ ನೆರೆಯುತ್ತದೆ.

ಕಬ್ಬರಗಿ ಕಪಲೆಪ್ಪನ ದಿಡಿಗು ಹೊಂದಿರುವ ಪ್ರದೇಶವು ಐತಿಹಾಸಿಕ ಸ್ಥಳ-